# ಬೆಂಗಳೂರು ವಿಶ್ವವಿದ್ಯಾಲಯ

## ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಘಟಕ

## ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಶೈಕ್ಷಣಿಕ ಗುಣಮಟ್ಟ ಸುಧಾರಿಸಲು ಪ್ರಸ್ತುತ ಹಮ್ಮಿಕೊಂಡಿರುವ ಕಲ್ಯಾಣ ಹಾಗೂ ಸುಧಾರಣಾ ಕಾರ್ಯಕ್ರಮಗಳು

1. **ಸಂಶೋಧನಾ ವಿದ್ಯಾರ್ಥಿಗಳಿಗೆ ಡಾ.ಬಿ.ಆರ್.ಅಂಬೇಡ್ಕರ್ ಮಾಸಿಕ ವಿದ್ಯಾರ್ಥಿ ವೇತನ (5 ವರ್ಷಗಳ ಅವಧಿಗೆ) :**

   (ಅ) ಮೊದಲು ಮೂರು ವರ್ಷಗಳು: ರೂ. 22,000/-

   (ಆ) ನಾಲ್ಕನೇ ವರ್ಷಕ್ಕೆ: ರೂ. 25,000/-

   (ಇ) ಐದನೇ ವರ್ಷಕ್ಕೆ : ರೂ. 25,000/-

2. **ಸಂಶೋಧನಾ ವಿದ್ಯಾರ್ಥಿಗಳಿಗೆ ಸಾದಿಲ್ವಾರು ವೆಚ್ಚದ ಹಣ (5 ವರ್ಷಗಳ)ಅವಧಿಗೆ;**

   (ಅ) ಪ್ರತಿ ವರ್ಷವೂ ರೂ.10,000/- ರಂತೆ ಕಲಾ, ವಾಣಿಜ್ಯ, ಶಿಕ್ಷಣ ಮತ್ತು ಕಾನೂನು ವಿದ್ಯಾರ್ಥಿಗಳಿಗೆ,

   (ಆ) ಪ್ರತಿ ವರ್ಷವೂ ರೂ.12,000/- ರಂತೆ ವಿಜ್ಞಾನ ಹಾಗೂ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ.

3. **ಪ.ಜಾ-ಪ.ಪಂ ವಿದ್ಯಾರ್ಥಿಗಳಿಗೆ ನೀಡುತ್ತಿರುವ ವೈದ್ಯಕೀಯ ವೆಚ್ಚ:**

   (ಅ) ಹೊರರೋಗಿ ಚಿಕಿತ್ಸೆಗೆ: ರೂ.4,000/-

   (ಆ) ಒಳರೋಗಿ ಚಿಕಿತ್ಸೆಗೆ: ರೂ.5,000/-

   (ಇ) ತುರ್ತು ಚಿಕಿತ್ಸೆಗೆ ಸಂಬಂಧಿತ ಪ್ರಾಧಿಕಾರಿಗಳಿಂದ ಅನುಮೋದನೆ ಪಡೆದು ಮಂಜೂರು ಮಾಡಲಾಗುವುದು.

4. **ಸಂಶೋಧನಾ ವಿದ್ಯಾರ್ಥಿಗಳ ಪ್ರೌಢ ಪ್ರಬಂಧ ಸಲ್ಲಿಕೆಗೆ ನೀಡುತ್ತಿರುವ ಹಣ: ರೂ.15,000/-**

5. **ವಿದ್ಯಾರ್ಥಿನಿಲಯದಲ್ಲಿ ವಾಸವಾಗಿರುವ ಸ್ನಾತಕೋತ್ತರ ಮತ್ತು ಸಂಶೋಧನಾ ವಿದ್ಯಾರ್ಥಿಗಳಿಗೆ ಕ್ರೀಡಾ ಸಾಮಗ್ರಿಗಳನ್ನು ನೀಡಲಾಗುತ್ತಿದೆ.**

6. **ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಶೋಧನಾ ವಿದ್ಯಾರ್ಥಿಗಳಿಗೆ ಅವರ ಸಂಶೋಧನಾ ಕಾರ್ಯಕ್ಕೆ ಅನುಕೂಲವಾಗಲು ಲ್ಯಾಪ್‌ಟಾಪ್‌ಗಳನ್ನು ನೀಡಲಾಗುತ್ತಿದೆ.**

## ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ

1. **ಕಿರು ಪ್ರಬಂಧ/ಪ್ರಾಜೆಕ್ಟ್ ಸಲ್ಲಿಸಲು ನೀಡುವ ಸಹಾಯ ಧನ : (ತಲಾ ಒಬ್ಬ ವಿದ್ಯಾರ್ಥಿಗೆ)**

   (ಅ) ಕಲಾ, ವಾಣಿಜ್ಯ, ಶಿಕ್ಷಣ ವಿದ್ಯಾರ್ಥಿಗಳಿಗೆ ರೂ.4,000/-

   (ಆ) ವಿಜ್ಞಾನ ಮತ್ತು ಬಿ.ಇ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ರೂ.4,500/-

   (ಇ) ಎಂ.ಇ ಮತ್ತು ಎಲ್.ಎಲ್.ಎಂ ವಿದ್ಯಾರ್ಥಿಗಳಿಗೆ ರೂ.5,500/-

   (ಈ) ವಿಶ್ವವಿದ್ಯಾಲಯದ ಪ್ರದರ್ಶನ ಕಲಾ ವಿಭಾಗದ ಪ್ರತಿ ವಿದ್ಯಾರ್ಥಿಗೆ ರೂ.5,000/-

2. **ಶೈಕ್ಷಣಿಕ ಪ್ರವಾಸಕ್ಕಾಗಿ ನೀಡುವ ಹಣದ ಮೊತ್ತ: (ತಲಾ ಒಬ್ಬ ವಿದ್ಯಾರ್ಥಿಗೆ)**
(ಅ) ಒಳರಾಜ್ಯದ ಪ್ರವಾಸಕ್ಕೆ ರೂ.3,000/-
(ಆ) ಹೊರ ರಾಜ್ಯದ ಪ್ರವಾಸಕ್ಕೆ ರೂ.4,000/-

3. **ದೈಹಿಕ ಶಿಕ್ಷಣದ ವಿದ್ಯಾರ್ಥಿಗಳಿಗೆ ಸಮವಸ್ತ್ರ ಖರೀದಿಸಲು ನೀಡುವ ಹಣದ ಮೊತ್ತ:**
ಬಿ.ಪಿ.ಇ.ಡಿ ಮತ್ತು ಎಂ.ಪಿ.ಇ.ಡಿ ವಿದ್ಯಾರ್ಥಿಗಳಿಗೆ ಮೊದಲ ಮತ್ತು ಎರಡನೇ ವರ್ಷಕ್ಕೆ ಮಾತ್ರ ರೂ.3,500/-

4. **ಶೈಕ್ಷಣಿಕ ಶಿಬಿರಕ್ಕಾಗಿ ನೀಡುವ ಹಣದ ಮೊತ್ತ**
ತಲಾ ಒಬ್ಬ ವಿದ್ಯಾರ್ಥಿಗೆ ರೂ.5,000/-

## ಇತರೆ ಸೌಲಭ್ಯಗಳು

5. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಕರ್ನಾಟಕ ಲೋಕ ಸೇವಾ ಅಯೋಗ ಅಥವಾ ಕರ್ನಾಟಕ ರಾಜ್ಯ ಸರ್ಕಾರದ ಅಡಿಯಲ್ಲಿ ಬರುವಂತಹ ಎಲ್ಲಾ ರೀತಿಯ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಾದ ಕೆ.ಎ.ಎಸ್, ಎಫ್.ಡಿ.ಎ, ಎಸ್.ಡಿ.ಎ, ಪೋಲೀಸ್ ಇಲಾಖೆ ಪರೀಕ್ಷೆಗಳು ಹಾಗೂ ಕೇಂದ್ರ ಲೋಕ ಸೇವಾ ಅಯೋಗವು ಅಯೋಜಿಸುವ ಐ.ಎ.ಎಸ್, ಐ.ಪಿ.ಎಸ್ ಮತ್ತು ಯು.ಜಿ.ಸಿ ನೆಟ್, ಕೆ-ಸೆಟ್(ಕರ್ನಾಟಕ), ಉಪನ್ಯಾಸಕರ ಅರ್ಹತಾ ಪೂರ್ವ ಪರೀಕ್ಷೆಗಳಿಗೆ ಪುಸ್ತಕಗಳನ್ನು ಒದಗಿಸಲಾಗುವುದು.

6. ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡ ಕಾಲೇಜುಗಳಿಗೆ ಈ ಕೆಳಕಂಡಂತೆ ಪುಸ್ತಕ ಮತ್ತು ಕಪಾಟು ಸರಬರಾಜು ಮಾಡುವುದು.

(ಅ) ಶೇಕಡ 100%(18%) ರಷ್ಟು ಮೀಸಲಾತಿ ಹೊಂದಿದಲ್ಲಿ ಅಂತಹ ಕಾಲೇಜುಗಳಿಗೆ ರೂ.75,000/- ಮೌಲ್ಯದ ಪುಸ್ತಕಗಳು
(ಆ) ಶೇಕಡ 75%(15%) ಮೀಸಲಾತಿ ಅನುಸರಿಸಿದಲ್ಲಿ ರೂ.50,000/- ಮೌಲ್ಯದ ಪುಸ್ತಕಗಳು ಮತ್ತು
(ಇ) ಶೇಕಡ 25%(10%) ಮೀಸಲಾತಿ ಅನುಸರಿಸಿದ್ದಲ್ಲಿ ರೂ.25,000/- ಪುಸ್ತಕಗಳು ಮತ್ತು 02 ಅಲಮೇರ ಖರೀದಿಸಿ ನೀಡಲಾಗುವುದು.

7. ಬೆಂಗಳೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿಭಾಗಗಳ ಪ.ಜಾ-ಪ.ಪಂಗಡ ವಿದ್ಯಾರ್ಥಿಗಳ ಗ್ರಂಥಾಲಯಗಳಿಗೆ ಪ್ರತಿ ವಿಭಾಗಕ್ಕೆ ರೂ.75,000/- ಮೌಲ್ಯದ ಪುಸ್ತಕಗಳನ್ನು ಸರಬರಾಜು ಮಾಡಲಾಗುವುದು.

13-12-2022

ವಿಶೇಷಾಧಿಕಾರಿಗಳು
ಪ.ಜಾ-ಪ.ಪಂ ಘಟಕ,
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು-560056